ಕರ್ನಾಟಕಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/43/2013-14. ದಿನಾಂಕ:29-08-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಕೆ.ಬಸವರಾಜ ತಂದೆ ಕೆ.ರುದ್ರಪ್ಪ<br>2)ಜಿ.ತಿಪ್ಪೇಸ್ವಾಮಿ ತಂದೆ ಲೇಟ್ ಕೆ.ರುದ್ರಪ್ಪ<br>3)ಕೆ.ಮರಿಸ್ವಾಮಿ ತಂದೆ ಕೆ.ಬಸವರಾಜ<br>4)ಕೊಟ್ರಮ್ಮ ಗಂಡ ಲೇಟ್ ರುದ್ರಪ್ಪ<br>5)ಜಿ.ಬಸವರಾಜ ತಂದೆ ಲೇಟ್ ರುದ್ರಪ್ಪ<br>ಲೋಕಿಕೆರೆ ಗ್ರಾಮ ಕೂಡ್ಲಿಗಿ ತಾಲೂಕು | ಸಾಕಮ್ಮ ಗಂಡ ಚನ್ನಬಸಪ್ಪ<br>ಲೋಕಿಕೆರೆ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಲೋಕಿಕೆರೆ ಗ್ರಾಮದ ಸನಂ 152ಬಿ/4. 157ಬಿ. 203ಡಿ. 288/3. 308. 309. 353ಎ. ವಿಸ್ತೀರ್ಣ 2-50. 0-93. 0-27. 3-00. 8-76. 22-80. 6-84. ಎಕ್ರೆ ಜಮೀನುಗಳನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಲೋಕಿಕೆರೆ ಗ್ರಾಮದ ಸನಂ 152ಬಿ/4. 157ಬಿ. 203ಡಿ. 288/3. 308. 309. 353ಎ. ವಿಸ್ತೀರ್ಣ 2-50. 0-93. 0-27. 3-00. 8-76. 22-80. 6-84. ಎಕ್ರೆ ಜಮೀನುಗಳನ್ನು ಸದರಿ ಗ್ರಾಮದ ಕೊಟ್ರಮ್ಮ ಗಂಡ ಲೇಟ್ ರುದ್ರಪ್ಪ ಇವರು ದಿನಾಂಕ 26-06-2007 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಲೋಕಿಕೆರೆ ಇವರು ನಮೂನೆ-21 ನೋಟಿಸನ್ನು ದಿನಾಂಕ 05-07-2007. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ಸಾಕಮ್ಮ ಗಂಡ ಚನ್ನಬಸಪ್ಪ ಇವರು ಸನಂ 152ಬಿ/4 ಮತ್ತು 157 ಜಮೀನುಗಳಿಗೆ ಮೌಕಿಕವಾಗಿ ತಕರಾರು ಎಂದು ತಿಳಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 01/2007-08. ದಿನಾಂಕ 06-08-2007. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 24-07-2013 ರಿಂದ 29-08-2016 ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಮತ್ತು ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಅರ್ಜಿದಾರರು ಲೋಕಿಕೆರೆ ಗ್ರಾಮದ ಸನಂ 152ಬಿ/4. 157ಬಿ. 203ಡಿ. 288/3. 308. 309. 353ಎ. ವಿಸ್ತೀರ್ಣ 2-50. 0-93. 0-27. 3-00. 8-76. 22-80. 6-84. ಎಕ್ರೆ ಜಮೀನುಗಳನ್ನು ನಾವುಗಳು ದಿನಾಂಕ 26-06-2007 ರಂದು ಪಾಲು ವಿಭಾಗದ ಪತ್ರ ಬರೆಯಸಿರುತ್ತೇವೆ ಅದರ ಪ್ರಕಾರ ಅಳತೆ ಮಾಡಿಸಿ 11ಇ.ನಕ್ಷೆಯನ್ನು ಪಡೆದಿರುತ್ತೇವೆ. ಕಾರಣ ಸದರಿ ಪಾಲು ವಿಭಾಗದ ಪತ್ರ ಹಾಗೂ 11ಇ. ನಕ್ಷೆ ಪ್ರಕಾರ ನಮ್ಮಗಳ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಅವರಿಗೆ ಈ ಪ್ರಕರಣದಲ್ಲಿ ಆಸಕ್ತಿ ಇಲ್ಲವೆಂದು ಕಂಡು ಬರುತ್ತದೆ.

ಮು.ತಿ.ನೊ-2

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ತಕರಾರುದಾರರು ವಿಚಾರಣೆಗೆ ಗೈರು ಹಾಜರಾಗಿದ್ದು ಅವರಿಗೆ ಈ ಪ್ರಕರಣದಲ್ಲಿ ಆಸಕ್ತಿ ಇಲ್ಲವೆಂದು ಪರಿಗಣಿಸುತ್ತಾ ಸನಂ 152ಬಿ/4. ವಿಸ್ತೀರ್ಣ 2-50. ಎಕ್ರೆ ಜಮೀನನ್ನು ಹೊರತು ಪಡಿಸಿ ಉಳಿದ ಜಮೀನುಗಳನ್ನು ಅರ್ಜಿದಾರರ ಕೋರಿಕೆಯಂತೆ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಲೋಕಿಕೆರೆ ಗ್ರಾಮದ ಸನಂ 152ಬಿ/4. 157ಬಿ. 203ಡಿ. 288/3. 308. 309. 353ಎ. ವಿಸ್ತೀರ್ಣ 2-50. 0-93. 0-27. 3-00. 8-76. 22-80. 6-84. ಎಕ್ರೆ ಜಮೀನುಗಳನ್ನು ದಿನಾಂಕ 26-06-2007 ರ ಪಾಲು ವಿಭಾಗದ ಪತ್ರ ಹಾಗೂ 11ಇ.ನಕ್ಷೆ ಪ್ರಕಾರ

| ಕ್ರಸಂ | ಹೆಸರು | ಸನಂ | ವಿಸ್ತೀರ್ಣ |
|---|---|---|---|
| 1 | ಜಿ.ಬಸವರಾಜ ತಂದೆ ಲೇಟ್ ರುದ್ರಪ್ಪ | 157ಬಿ.<br>309ಪೈಕಿ.<br>353ಎ. | 0-93.<br>5-33.<br>6-84. |
| 2 | ಜಿ.ತಿಪ್ಪೇಸ್ವಾಮಿ ತಂದೆ ಲೇಟ್. ರುದ್ರಪ್ಪ | 203ಡಿಪೈಕಿ.<br>308ಪೈಕಿ.<br>309ಪೈಕಿ. | 0-13.50<br>5-04.<br>4-96. |
| 3 | ಕೆ.ಮರಿಸ್ವಾಮಿ ತಂದೆ ಕೆ.ಬಸವರಾಜ | 203ಡಿಪೈಕಿ.<br>308ಪೈಕಿ.<br>309ಪೈಕಿ. | 0-13.50.<br>3-72.<br>9-91. |
| 4 | ಕೊಟ್ರಮ್ಮ ಗಂಡ ಲೇಟ್ ರುದ್ರಪ್ಪ | 288/3 | 3-00. |
| 5 | ಕೆ.ಬಸವರಾಜ ತಂದೆ ಕೆ.ರುದ್ರಪ್ಪ | 309ಪೈಕಿ. | 2-60 |

ಈ ಮೇಲಿನಂತೆ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ. ಹಾಗೂ ಮುದ್ರಾಂಕ ಶುಲ್ಕ ಪಾವತಿಸಲು ಸಹಾ ಆದೇಶಿಸಲಾಗಿದೆ. ಹಾಗೂ ಸನಂ 152ಬಿ/4. ವಿಸ್ತೀರ್ಣ 2-50. ಎಕ್ರೆ ಜಮೀನನ್ನು ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 29-08-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ [illegible]
ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಕೊಟ್ರಮ್ಮ ಗಂಡ ಲೇಟ್ ರುದ್ರಪ್ಪ ಹಾಗೂ ಇತರರು ಲೋಕಿಕೆರೆ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಸಾಕಮ್ಮ ಗಂಡ ಚೆನ್ನಬಸಪ್ಪ ಲೋಕಿಕೆರೆ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.